ಅಂಗನವಾಡಿ ಕೇಂದ್ರಗಳಿಗೆ ಕಳಪೆ ಮಟ್ಟದ ಆಹಾರ ಪೂರೈಕೆ

92(1416); ಶ್ರೀ ವಿಶ್ವನಾಥ ಈ ಪಾಟೀಲ್

ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿರುವ ಅಪೌಷ್ಠಿಕ ಮಕ್ಕಳ ಸಂಖ್ಯೆ ಎಷ್ಟು? ಅಪೌಷ್ಠಿಕ ಮಕ್ಕಳ ಸಂಖ್ಯೆ ಕಡಿಮೆ ಮಾಡಲು ಇಲ್ಲಿಯವರೆಗೆ ತೆಗೆದುಕೊಂಡ ಕ್ರಮಗಳೇನು?

ಆ) ಅಂಗನವಾಡಿ ಕೇಂದ್ರಗಳಿಗೆ ಪೂರೈಕೆಯಾಗುತ್ತಿರುವ ಆಹಾರ ಪದಾರ್ಥಗಳ ಗುಣಮಟ್ಟಕಳಪೆಯಾಗಿದ್ದು, ಇದರಿಂದ ತಯಾರಾದ ಆಹಾರವನ್ನು ಸೇವಿಸಿದ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ ಅಪೌಷ್ಠಿಕ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಹಾಗಿದ್ದಲ್ಲಿ, ಅಂಗನವಾಡಿ ಕೇಂದ್ರಗಳಿಗೆ ಪೂರೈಕೆಯಾಗುತ್ತಿರುವ ಆಹಾರ ಸಾಮಗ್ರಿಗಳ ಗುಣಮಟ್ಟವನ್ನು ಪರೀಕ್ಷಿಸಲು ಯಾವ ಯಾವ ಪ್ರಯೋಗಾಲಯದಿಂದ ಪರೀಕ್ಷೆಗೊಳಪಡಿಸಲಾಗಿದೆ?

ಈ) ಈ ಪರೀಕ್ಷೆಯಿಂದ ಆಹಾರ ಪದಾರ್ಥಗಳು ಕಳಪೆಯಾಗಿರುವುದು ದೃಢಪಟ್ಟಲ್ಲಿ, ಪೂರೈಕೆ ಮಾಡಿದವರ ಮೇಲೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ರಾಜ್ಯದಲ್ಲಿರುವ ಅಪೌಷ್ಟಿಕ ಮಕ್ಕಳ ವಿವರ ಈ ಕೆಳಗಿನಂತಿದೆ.

ವರ್ಷ	ಅಪೌಷ್ಟಿಕ ಮಕ್ಕಳ ಸಂಖ್ಯೆ
2011–12	57786
2012–13	51453
2013–14	35209

ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಕಡಿಮೆ ಮಾಡಲು ಮತ್ತು ಮಕ್ಕಳ ಸುಧಾರಣೆಗಾಗಿ ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1) ಗರ್ಭಿಣಿ/ಬಾಣಂತಿಯರಿಗೆ ಪೂರಕ ಪೌಷ್ಟಿಕ ಆಹಾರ ಮತ್ತು ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

2) ತೀವ್ರ ಅಪೌಷ್ಟಿಕ ಮಕ್ಕಳಿಗೆ ಪ್ರತಿ ದಿನ ರೂ.9.00 ಮೌಲ್ಯದ ಪೂರಕ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ.

3) ತುರ್ತು ಚಿಕಿತ್ಸೆಯ ಅಗತ್ಯವಿರುವ 0–6 ವರ್ಷದ, ಬಡತನ ರೇಖೆಗಿಂತ ಕೆಳಗಿರುವ ಅಂಗನವಾಡಿ ಮಕ್ಕಳಿಗೆ ಬಾಲಸಂಜೀವಿನಿ ಯೋಜನೆಯಡಿ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ರಾಜ್ಯಾದ್ಯಂತ 31 ಬಾಲಸಂಜೀವಿನಿ ಆಸ್ಪತ್ರೆಗಳನ್ನು ಗುರುತಿಸಲಾಗಿದೆ. ಈ ಯೋಜನೆಯಡಿ ತುರ್ತು ಚಿಕಿತ್ಸೆಯ ಅವಶ್ಯವಿರುವ ಮಗುವಿಗೆ ಗರಿಷ್ಟ ರೂ.35,000/– ಹಾಗೂ ನವಜಾತ ಶಿಶು ಆರೈಕೆ ಮತ್ತು ಚಿಕಿತ್ಸೆಗೆ ಪ್ರತಿ ಮಗುವಿಗೆ ಗರಿಷ್ಟ ರೂ.50,000/– ವೆಚ್ಚ ಭರಿಸಬಹುದಾಗಿದೆ.

4) ಕ್ಷೀರಭಾಗ್ಯ ಯೋಜನೆಯಡಿ ರಾಜ್ಯದ ಪ್ರತಿ ಅಂಗನವಾಡಿ ಮಗುವಿಗೂ ವಾರದಲ್ಲಿ 3 ದಿನ 150 ಎಂ.ಎಲ್. ಹಾಲನ್ನು ನೀಡಲಾಗುತ್ತಿದೆ.

5) ತೀವ್ರ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ದಿನ 200 ಎಂ.ಎಲ್ ಹಾಲನ್ನು, ಮೊಟ್ಟೆ ಸ್ವೀಕರಿಸದಿರುವ ಮಕ್ಕಳಿಗೆ ವಾರದಲ್ಲಿ 6 ದಿನ ಹಾಲನ್ನು ನೀಡಲಾಗುತ್ತಿದೆ.

6) ರಾಜ್ಯದ ಹಿಂದುಳಿದ ಜಿಲ್ಲೆಗಳಾದ ಕೊಪ್ಪಳ, ಬೀದರ್, ಗುಲ್ಬರ್ಗಾ, ರಾಯಚೂರು ಹಾಗೂ ಯಾದಗಿರಿಗಳಲ್ಲಿರುವ ಸಾಧಾರಣ ಅಪೌಷ್ಟಿಕ ಮಕ್ಕಳಿಗೂ ಸಹ 3 ದಿನ ಮೊಟ್ಟೆ ಹಾಗೂ 3 ದಿನ 200 ಎಂ.ಎಲ್ ಹಾಲನ್ನು ನೀಡಲಾಗುತ್ತಿದೆ.

7) ತೀವ್ರ ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ ಯೋಜನೆಯಡಿ ಔಷಧಿ ಹಾಗೂ ಚಿಕಿತ್ಸಾ ಆಹಾರಕ್ಕಾಗಿ (Therapeutic food) ಪ್ರತಿ ವರ್ಷ ಪ್ರತಿ ಮಗುವಿಗೆ ರೂ.750/–ಗಳನ್ನು ನೀಡಲಾಗುತ್ತಿದೆ.

8) ತಾಯಂದಿರ ಸಭೆ ಹಾಗೂ ಮಕ್ಕಳ ಪೌಷ್ಟಿಕ ಆಹಾರ ಶಿಬಿರಗಳನ್ನು ಅಂಗನವಾಡಿ ಕೇಂದ್ರಗಳ ಮೂಲಕ ಏರ್ಪಡಿಸಿ, ಕಡಿಮೆ ವೆಚ್ಚದಲ್ಲಿ ಪೌಷ್ಠಿಕ ಆಹಾರ ತಯಾರಿಸುವ ಬಗ್ಗೆ ಮಹಿಳೆಯರಿಗೆ ತಿಳುವಳಿಕೆಯನ್ನು ನೀಡಲಾಗುತ್ತಿದೆ.

ಆ) ಇಲ್ಲ

ಅಪೌಷ್ಟಿಕ ಮಕ್ಕಳ ಸಂಖ್ಯೆ ಇಳಿಮುಖವಾಗುತ್ತಿದೆ.

ಇ) ಅಂಗನವಾಡಿ ಕೇಂದ್ರಗಳಿಗೆ ಪೂರೈಕೆಯಾಗುತ್ತಿರುವ ಆಹಾರ ಸಾಮಗ್ರಿಗಳ ಗುಣಮಟ್ಟವನ್ನು ಈ ಕೆಳಕಂಡ ಪ್ರಯೋಗಾಲಯದಿಂದ ಪರೀಕ್ಷೆಗೆ ಒಳಪಡಿಸಲಾಗಿದೆ.

1) ಮುಖ್ಯ ರಾಸಾಯನಿಕ ತಜ್ಞರು ಮತ್ತು ಆಹಾರ ವಿಶ್ಲೇಷಕರು, ಮೈಸೂರು ವಿಭಾಗೀಯ ಪ್ರಯೋಗಾಲಯ, ಮೈಸೂರು.

2) ಮುಖ್ಯ ಆಹಾರ ತಜ್ಞರು ಮತ್ತು ಆಹಾರ ವಿಶ್ಲೇಷಕರು, ಬೆಳಗಾವಿ.

3) ಮುಖ್ಯ ರಾಸಾಯನ ತಜ್ಞರು ಮತ್ತು ಆಹಾರ ವಿಶ್ಲೇಷಕರು, ಕಲಬುರಗಿ ವಿಭಾಗೀಯ ಆಹಾರ ಪ್ರಯೋಗಾಲಯ, ಕಲಬುರಗಿ.

4) ರಾಜ್ಯ ಆಹಾರ ಮತ್ತು ನೀರಿನ ವಿಶ್ಲೇಷಣಾ ಪ್ರಯೋಗಾಲಯ, ಬೆಂಗಳೂರು.

ಈ) ಅಂಗನವಾಡಿ ಕೇಂದ್ರಗಳಿಗೆ ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಪೂರೈಸಿದವರ ವಿರುದ್ಧ ಮತ್ತು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ:

1) ಮೈಸೂರು ಜಿಲ್ಲೆಯಲ್ಲಿ ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಪೂರೈಸಿರುವುದು ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿರುವುದರಿಂದ ಕಳಪೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಿದವರ ವಿರುದ್ಧ ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ಅವರುಗಳ ವಿರುದ್ಧ ನ್ಯಾಯಾಲಯಕ್ಕೆ ಎಫ್.ಐ.ಆರ್ ಸಲ್ಲಿಸಲಾಗಿದೆ.

2) ಬೆಂಗಳೂರು ನಗರ ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಟಿಕ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ವಿಫಲರಾದ ಅಧಿಕಾರಿಗಳನ್ನು ಸೇವೆಯಿಂದ ಅಮಾನತ್ತುಪಡಿಸಿ, ಅವರ ಕರ್ತವ್ಯಲೋಪಗಳ ಬಗ್ಗೆ ದೋಷಾರೋಪಣಾ ಪಟ್ಟಿ ಜಾರಿ ಮಾಡಿದೆ. ದೋಷಾರೋಪಣಾ ಪಟ್ಟಿಗೆ ಅವರುಗಳು ಸಲ್ಲಿಸಿರುವ ಸಮಾಜಾಯಿಷಿಯನ್ನು ಪರಿಶೀಲಿಸಿ, ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನು ನೇಮಿಸಲು ಪರಿಶೀಲಿಸಲಾಗುತ್ತಿದೆ.

3) ಬಳ್ಳಾರಿ ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಅಂಗನವಾಡಿ ಕೇಂದ್ರಗಳಿಗೆ ಎಂ.ಎಸ್.ಪಿ.ಟಿ.ಸಿ. ಗಳು ಸರಬರಾಜು ಮಾಡಿದ ಆಹಾರ ಪದಾರ್ಥಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮೇಲ್ವಿಚಾರಣೆ ಮಾಡದ ಕಾರಣ ನಿರ್ದೇಶನಾಲಯದ ಆದೇಶ ದಿನಾಂಕ:15.10.2014 ರಂದು ಸೇವೆಯಿಂದ ಅಮಾನತ್ತು ಮಾಡಲಾಗಿದೆ.

4) ಮಂಡ್ಯ ಜಿಲ್ಲೆಯಲ್ಲಿ ಕೆಲವು ಎಂ.ಎಸ್.ಪಿ.ಟಿ.ಸಿ. ಗಳು ಸರಬರಾಜು ಮಾಡಿದ ಆಹಾರ ಪದಾರ್ಥಗಳು ಕಳಪೆ ಗುಣಮಟ್ಟದಿಂದ ಕೂಡಿರುವುದಾಗಿ ಪ್ರಯೋಗಾಲಯದಿಂದ ವರದಿ ಬಂದಿರುತ್ತದೆ. ಈ ಆಹಾರ ಪದಾರ್ಥಗಳನ್ನು ಮೇಲ್ವಿಚಾರಣೆ ಮಾಡದೇ ಕರ್ತವ್ಯಲೋಪವೆಸಗಿರುವ ಜಿಲ್ಲೆಯ ಎಲ್ಲಾ 8 ತಾಲ್ಲೂಕುಗಳ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ವಿರುದ್ಧ ದೋಷಾರೋಪಣ ಪಟ್ಟಿ ಜಾರಿಗೊಳಿಸಲು ಕ್ರಮವಹಿಸಲಾಗುತ್ತಿದೆ.

5) ಕೋಲಾರ ಜಿಲ್ಲೆಯಲ್ಲಿ ಆಹಾರ ಪದಾರ್ಥಗಳನ್ನು ಹೆಚ್ಚಿನ ಬೆಲೆಗೆ ಖರೀದಿಸಿ ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಪೂರೈಸಿರುವುದನ್ನು ಉಸ್ತುವಾರಿ ಮಾಡದ ಉಪನಿರ್ದೇಶಕರನ್ನು ದಿನಾಂಕ:03.02.2015ರ ಸರ್ಕಾರಿ ಆದೇಶದಲ್ಲಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

6) ಬೀದರ್ ಜಿಲ್ಲೆಯಲ್ಲಿ ಎಂ.ಎಸ್.ಪಿ.ಟಿ.ಸಿ ಗಳಿಂದ ಪೂರಕ ಪೌಷ್ಟಿಕ ಆಹಾರಗಳನ್ನು ಸರಬರಾಜು ಮಾಡಲು ನಡೆಸಲಾದ ಟೆಂಡರ್ ಪ್ರಕ್ರಿಯೆಯಲ್ಲಿ ಕರ್ತವ್ಯ ಲೋಪವೆಸಗಿರುವ ಉಪನಿರ್ದೇಶಕರನ್ನು ದಿನಾಂಕ: 03.02.2015ರ ಸರ್ಕಾರಿ ಆದೇಶದಲ್ಲಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. ಅಂಗನವಾಡಿ ಕೇಂದ್ರಗಳಲ್ಲಿರುವ ಮಕ್ಕಳಿಗೆ ಪೂರಕ ಪೌಷ್ಟಿಕ ಆಹಾರ ಪದಾರ್ಥಗಳನ್ನು ವಿತರಿಸುವಲ್ಲಿ ಎಲ್ಲಾ ಜಿಲ್ಲಾ ಉಪನಿರ್ದೇಶಕರು/ಶಿಶುಅಭಿವೃದ್ಧಿ ಯೋಜನಾಧಿಕಾರಿಗಳು/ಎಂ.ಎಸ್.ಪಿ.ಟಿ.ಸಿ.ಗಳು ವಹಿಸಬೇಕಾದ ಮುನ್ನೆಚ್ಚರಿಕೆ /ಕ್ರಮಗಳ ಬಗ್ಗೆ ಕಟ್ಟುನಿಟ್ಟಾಗಿ ಸೂಚನೆಗಳನ್ನು ನೀಡಲಾಗಿದೆ.

ಶ್ರೀ ವಿಶ್ವನಾಥ್ ಈ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಇದರಲ್ಲಿ 2013–14ನೇ ಸಾಲಿನಲ್ಲಿ ಅಪೌಷ್ಟಿಕ ಮಕ್ಕಳ ಸಂಖ್ಯೆ 35,000 ಇದೆ. ಇದು ಇನ್ನೂ ಕಡಿಮೆ ಆಗಬೇಕು. ಬಾಳ ಸಂಜೀವಿನಿ ಎಂಬ ಯೋಜನೆಯನ್ನು ಕೆಲವೊಂದು ಆಸ್ಪತ್ರೆಗಳಿಗೆ ಕೊಟ್ಟಿದ್ದಾರೆ. ಅಲ್ಲಿ ಏನು ತೊಂದರೆಯಾಗುತ್ತಿದೆ ಎಂದರೆ, 35,000 ದಿಂದ 50,000ರವರೆಗೆ ದುಡ್ಡನ್ನು ಕೊಡುತ್ತಾರೆ. ಮೊದಲು ಹಣವನ್ನು ಆಸ್ಪತ್ರೆಯಲ್ಲಿ ಜಮ ಮಾಡಿ ಆ ಮೇಲೆ ಅವರು ಎಷ್ಟು ಉಪಯೋಗ ಮಾಡುತ್ತಾರೆ ಅದನ್ನು ಮತ್ತೆ ಅಲ್ಲಿ ಕೊಡುವಂತಹ ಪದ್ಧತಿ ಇದೆ. ಈಗ ಒಂದು ವರ್ಷದಿಂದ ಅಲ್ಲಿ ದುಡ್ಡು ಕೊಡುತ್ತಿಲ್ಲ. ಉದಾಹರಣೆಗೆ ಹೇಳಬೇಕೆಂದರೆ, ಬೆಳಗಾಂ ಜಿಲ್ಲೆಯಲ್ಲಿ KLE ಆಸ್ಪತ್ರೆ ಇದೆ ಆ ಆಸ್ಪತ್ರೆಯಲ್ಲಿ ಬೇರೆ ಬೇರೆ ಜಿಲ್ಲೆಗಳಿಂದ ರೋಗಿಗಳು ಬರುತ್ತಾರೆ. ಇವರು ಜಿಲ್ಲೆವಾರು ದುಡ್ಡು ಕೊಡುವುದರಿಂದ ಬೇರೆ ಜಿಲ್ಲೆಗಳಿಂದ ಬಂದಂತಹ ರೋಗಿಗಳಿಗೆ ದುಡ್ಡು ಕೊಡಲಾಗಿದೆ 70 ಲಕ್ಷ ರೂ. ಅಲ್ಲಿ ಪೆಂಡಿಂಗ್ ಇದೆ. ಅದಕ್ಕೆ ಅವರು ಬೇರೆ ಜಿಲ್ಲೆ ರೋಗಿಗಳು ಬಂದಿದ್ದಕ್ಕಾಗಿ ಆ ಜಿಲ್ಲೆಗೆ ಕಡಿಮೆ ಮಾಡಿ ಅವರಿಗೆ ಕೊಟ್ಟರೆ ಅದು ಒಳ್ಳೆಯಾಗುತ್ತದೆ. ಅದಕ್ಕಾಗಿ ಇವರು ಬೇರೆ ಜಿಲ್ಲೆಯಲ್ಲಿ ಪೇಷೆಂಟ್ ಕಡಿಮೆ ಇದ್ದರೆ ಆ ಜಿಲ್ಲೆಗೆ ಕಡಿಮೆ ಮಾಡಿ ಇಲ್ಲಿಗೆ ಕೊಟ್ಟರೆ ಅದು ಒಳ್ಳೆಯ ರೀತಿಯಿಂದ ಆಗುತ್ತದೆ ಎನ್ನುವುದು ಒಂದು ವಿಚಾರ. ಇದರ ಜೊತೆಗೆ ಅಂಗನವಾಡಿ ಕೇಂದ್ರಗಳಿಗೆ ಪೂರೈಕೆಯಾಗುತ್ತಿರುವ ಆಹಾರ ಪದಾರ್ಥದ ಗುಣಮಟ್ಟ ಕಳಪೆಯಾಗಿದೆಯೆ ಎಂದು ಕೇಳಿರುವ ಪ್ರಶ್ನೆಗೆ ಇವರು ಇಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಸಾಕಷ್ಟು ಕಳಪೆ ಪದಾರ್ಥ ಕೊಡುವಂಥ ಕೆಲವೊಂದಷ್ಟು ಕಡೆ ಇವರು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದಾರೆ. ಆದರೆ ಸಪ್ಲೈ ಮಾಡಿದವರ ಮೇಲೆ ಎಲ್ಲಿಯೂ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಅದಕ್ಕಾಗಿ ಯಾರು ಸಪ್ಲೈ ಮಾಡಿದ್ದಾರೆ ಅವರ ಮೇಲೂ ಕ್ರಮ ತೆಗೆದುಕೊಳ್ಳುವಂಥದ್ದು ಆಗಬೇಕು. ಅಪೌಷ್ಟಿಕ ಮಕ್ಕಳ ಸಂಖ್ಯೆ 35 ಸಾವಿರ ಸಂಖ್ಯೆ ಏನಿದೆ ಅದು ಇನ್ನೂ ಕಡಿಮೆಯಾಗಬೇಕು. ಏಕೆಂದರೆ ಅಪೌಷ್ಟಿಕ ಮಕ್ಕಳು ಇವತ್ತು ಬಹಳ ಹೆಚ್ಚಾಗುತ್ತಿದ್ದಾರೆ. ಇವತ್ತು ಗ್ರೇಡ್ 1, 2, 3 ಎಂದು ಹೇಳಿ ಮೂರು

ಗ್ರೇಡ್‌ನೊಳಗೆ ಐಡಿಂಟಿಫಿಕೇಶನ್ ಮಾಡುತ್ತಿದ್ದಾರೆ. ಆದರೆ ಏನಾಗುತ್ತಿದೆ ನೀವು ಗ್ರೇಡ್ 1 ಮತ್ತು 2 ಇದ್ದವರ ಬಗ್ಗೆ ಹೆಚ್ಚು ಕಾಳಜಿ ಮಾಡುವುದಿಲ್ಲ. ಗ್ರೇಡ್ 3 ಬಂದಮೇಲೆ ಅವರಿಗೆ ಆಹಾರವನ್ನು ಕೊಡುವಂಥದ್ದು ಅಥವಾ ಟ್ರೀಟ್‌ಮೆಂಟ್ ಕೊಡುವಂಥದ್ದನ್ನು ಮಾಡುತ್ತಾರೆ. ಗ್ರೇಡ್ 1 ಇದ್ದಾಗಲೇ ಅವರನ್ನು ಐಡೆಂಟಿಫೈ ಮಾಡಿ ಅಲ್ಲೇ ಹೆಚ್ಚಿನ ಟ್ರೀಟ್ ಮೆಂಟ್ ಕೊಟ್ಟರೆ ಗ್ರೇಡ್ 3 ಗೆ ಹೋಗುವುದನ್ನು ತಪ್ಪಿಸಬಹುದು ಎನ್ನುವಂಥ ವಿಚಾರವನ್ನು ಮಾನ್ಯ ಮಂತ್ರಿಗಳಿಗೆ ತಿಳಿಸಬಯಸುತ್ತೇನೆ.

ಶ್ರೀಮತಿ ಉಮಾಶ್ರೀ: ಮಾನ್ಯ ಉಪಾಧ್ಯಕ್ಷರೆ, ಏನು ಅವರು ಕೇಳಿದ್ದಾರೆ ಈ ವಿಚಾರದಲ್ಲಿ ಅವರ ಆತಂಕವನ್ನು ವ್ಯಕ್ತಪಡಿಸಿ ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳು ಏನು 35209 ಇದೆ ಅದು ಇನ್ನೂ ಕಡಿಮೆಯಾಗಬೇಕು ಎಂಬುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಸಂತೋಷ. ಆದರೆ 2013–14 ಕ್ಕೆ ಮುಂಚಿತವಾಗಿ ತಾವು ನೋಡಿದಾಗ, 2011–12 ರಲ್ಲಿ 57786, 2012–13 ರಲ್ಲಿ 51453, 2013–14 ರಲ್ಲಿ 35209 ಆಗಿದೆ. ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ, ಈಗ ಮೊನ್ನೆ ಡಿಸೆಂಬರ್‌ವರೆಗೂ ಅಪೌಷ್ಟಿಕತೆಯ ಮಕ್ಕಳ ಮಾಹಿತಿ ನಮ್ಮಲ್ಲಿದೆ ಅದರಲ್ಲಿ ಈ ಸಾರಿ ಡಿಸೆಂಬರ್ 2014 ರ ಹೊತ್ತಿಗೆ 29861 ಮಕ್ಕಳಿದ್ದಾರೆ. ಅಂದರೆ ಅಪೌಷ್ಟಿಕತೆಯ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಾ ಹೋಗುತ್ತಿದೆ. ಇನ್ನೂ ನಾವು ಇದನ್ನು ಶೂನ್ಯ ಮಟ್ಟಕ್ಕೆ ತರಬೇಕು ಎನ್ನತಕ್ಕಂಥದ್ದು ನಮ್ಮ ಉದ್ದೇಶವೂ ಕೂಡ ಆಗಿದೆಯೆನ್ನುವ ಮಾತನ್ನು ಹೇಳಬಯಸುತ್ತೇನೆ. ಅದಕ್ಕೆ ಸಂಬಂಧಪಟ್ಟ ಹಾಗೆ ನಾವು ಅನೇಕ ಕಾರ್ಯಕ್ರಮಗಳನ್ನು ರೂಪಿಸಿರತಕ್ಕಂಥದ್ದರ ಬಗ್ಗೆ ಈಗಾಗಲೇ ನಮ್ಮ ಉತ್ತರದಲ್ಲಿ ಕೊಟ್ಟಿದ್ದೇವೆ. ಅದರಲ್ಲಿ ಬಾಲಸಂಜೀವಿನಿ ಎನ್ನತಕ್ಕಂಥದ್ದು ಕೂಡ ಒಂದು. ಬಾಲಸಂಜೀವಿನಿ ಎನ್ನತಕ್ಕಂಥ ಬಹುಶಃ ದೇಶದಲ್ಲಿಯೇ ನಮ್ಮ ರಾಜ್ಯದಲ್ಲಿ ಪ್ರಪ್ರಥಮವಾಗಿ ತಂದಿರತಕ್ಕಂಥ ಬಹಳ ಉಪಯುಕ್ತವಾದಂಥ ಕಾರ್ಯಕ್ರಮವಾಗಿದೆ. ಇದು ಅತ್ಯಂತ ಕಡು ಬಡ ಮಕ್ಕಳಿಗೆಲ್ಲರಿಗೂ ಅನುಕೂಲವಾಗುತ್ತದೆ. ಈ ನವಜಾತ ಶಿಶುಗೂ ಕೂಡ ನಾವು ಕೊಡತಕ್ಕಂಥ ಹಣವನ್ನು ಹೆಚ್ಚು ಮಾಡಿದ್ದೇವೆ. ಇದರಲ್ಲಿ ಕೆ.ಎಲ್.ಇ.

ಆಸ್ಪತ್ರೆಗಳಲ್ಲಿ ಬೇರೆ ಬೇರೆ ಜಿಲ್ಲೆಗಳಿಂದ ಬರತಕ್ಕಂಥವರಿಗೆ ಅಲ್ಲಿ ಕೊಡುವುದಿಲ್ಲ ಎನ್ನತಕ್ಕಂಥ ಸಮಸ್ಯೆಯ ಬಗ್ಗೆ ತಾವು ಹೇಳಿದಿರಿ. ಅದರ ಬಗ್ಗೆ ಆದಷ್ಟು ಶೀಘ್ರವಾಗಿ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಅದನ್ನು ಪರಿಹರಿಸಿಕೊಡತಕ್ಕಂಥ ಕೆಲಸವನ್ನು ನಾನು ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ವರ್ಷದಲ್ಲಿ ಬಾಲ ಸಂಜೀವಿನಿಗೆ 20 ಕೋಟಿ ರೂ.ಗಳ ಅನುದಾನವನ್ನು ನಿಗದಿ ಮಾಡಿದ್ದು ಈಗಾಗಲೇ 15 ಕೋಟಿ ರೂ.ಗಳನ್ನು ನಾವು ಬಿಡುಗಡೆ ಮಾಡಿಸಿಕೊಂಡಿದ್ದೇವೆ. ನಾಲ್ಕನೇ ಕಂತಿನ ಹಣವನ್ನು ಕೂಡ ಈಗ ಬಿಡುಗಡೆ ಮಾಡುತ್ತಿದ್ದಾರೆ. ಈ ವರ್ಷ ಈ ಕಾರ್ಯಕ್ರಮಕ್ಕೆ ಹೆಚ್ಚಿನ ಬೇಡಿಕೆಯಿದೆ. ಬಹಳಷ್ಟು ಜಿಲ್ಲೆಗಳಿಂದ ಹೆಚ್ಚಿನ ಬೇಡಿಕೆಯಿರತಕ್ಕಂಥ ಕಾರ್ಯಕ್ರಮವಾಗಿದೆ. ಬಹಳ ಉಪಯುಕ್ತವಾದಂಥದ್ದು. ನಾವು ಕೂಡ ಹಣಕಾಸು ಇಲಾಖೆಗೆ ಇನ್ನು ಹೆಚ್ಚುವರಿಯಾಗಿ 10 ಕೋಟಿ ರೂ.ಗಳ ಅವಶ್ಯಕತೆಯಿದೆಯೆಂದು ಕೇಳಿಕೊಂಡಿದ್ದೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಯಾವ ಒಂದು ಕೇಂದ್ರಗಳಲ್ಲಿ ಕಳಪೆ ಗುಣಮಟ್ಟದ ಆಹಾರಗಳು ಸಪ್ಲೈ ಆಗಿದೆ ಎನ್ನತಕ್ಕಂಥದ್ದರ ಬಗ್ಗೆ ನೀವು ಕೇಳಿದ್ದೀರಿ. ಅಂಗನವಾಡಿಗೆ ಪೂರೈಕೆಯಾಗಿರತಕ್ಕಂಥ ಆಹಾರ ಪದಾರ್ಥಗಳು ಏನು ಕಳಪೆ ಮಟ್ಟದಲ್ಲಿ ಕೊಟ್ಟಿರುತ್ತಾರೋ ಅಂಥವರ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ ಎಂದಿದ್ದೀರಿ. ಕೆಲವೊಂದು ಕೇಸ್‌ಗಳನ್ನು ನಾವು lodge ಮಾಡಿದ್ದೇವೆ, ಯಾರು ಸಪ್ಲೈಯರ್ ಇದ್ದಾರೆ ಅವರ ವಿರುದ್ಧವಾಗಿಯೂ ಮಾಡಿದ್ದೇವೆ, ಯಾರು ಯಾರು ಇಂಥ ಸಪ್ಲೈ ಆಗುವುದಕ್ಕೆ ಕಾರಣಕರ್ತರಾಗಿರತಕ್ಕಂಥ ಅಧಿಕಾರಿಗಳು ಅದರಲ್ಲಿ ಅವ್ಯವಹಾರಗಳನ್ನು ಮಾಡುವುದಕ್ಕೆ ಕೈಜೋಡಿಸಿದ್ದಾರೋ ಅಂಥವರು ಡಿ.ಡಿ. ಇರಲಿ, ಸಿ.ಡಿ.ಪಿ.ಓ. ಇರಲಿ, ಸಾಕಷ್ಟು ಜನಗಳ ಮೇಲೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ, ಸಸ್ಪೆಂಷನ್‌ಗಳನ್ನು ಮಾಡಿದ್ದೇವೆ, ಇಲಾಖಾ ವಿಚಾರಣೆಗಳನ್ನು ಕೂಡ ಮಾಡಲು ನಾವು ಮುಂದಾಗಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಉಪಾಧ್ಯಕ್ಷರೆ, ಈ ಅಂಗನವಾಡಿಗಳಿಗೆ food supply ಮಾಡುತ್ತಾರಲ್ಲ, ಈಗ quality food supply ಮಾಡಬೇಕು ಎಂಬುದು ಎಲ್ಲರ ಅಭಿಪ್ರಾಯ. ಕಳಪೆ ಆಹಾರ ಪದಾರ್ಥ ಸಪ್ಲೈ ಆಗಬಾರದು, ಗುಣಮಟ್ಟ ಕಡಿಮೆಯಾಗಿ ಆ ಮಕ್ಕಳು ಅಪೌಷ್ಟಿಕತೆಯಿಂದ ಬಳಲಬಾರದು ಎಂಬುದು ಎಲ್ಲರ ಅಭಿಪ್ರಾಯವಾಗಿದೆ. ಸರಬರಾಜು ಮಾಡುವುದನ್ನು ಖಾಸಗಿಯವರಿಗೆ ಕೊಡುತ್ತಿದ್ದೀರೋ ಅಥವಾ ನೀವು ಟೆಂಡರ್ ಮಾಡಿ ಮಾಡುತ್ತಿದ್ದೀರೋ ಅಥವಾ ಸರ್ಕಾರದಿಂದಲೇ ಸಪ್ಲೈ ಮಾಡುತ್ತೀರೋ ಎನ್ನತಕ್ಕಂಥದ್ದರ ಬಗ್ಗೆ ನಮಗೆ ಸ್ವಲ್ಪ ತಿಳಿಸಿ.

ಶ್ರೀಮತಿ ಉಮಾಶ್ರೀ: ಮಾನ್ಯ ಉಪಾಧ್ಯಕ್ಷರೆ, ಈಗ ಏನು ಬಹುಶಃ ಕಳಪೆ ಆಹಾರಕ್ಕೆ ಸಂಬಂಧಪಟ್ಟಂತೆ ಬಹಳ ಹಿಂದೆಯೇ ಅಂದರೆ ಈಗೊಂದು ನಾಲ್ಕೈದು ವರ್ಷಗಳ ಹಿಂದೆಯೇ ಬಹಳ ದೊಡ್ಡ ಪ್ರಕರಣ ನಡೆದಿತ್ತು ಎನ್ನುವುದರ ಆಧಾರದ ಮೇಲೆ ಅದನ್ನು open ಇಟ್ಟು ಅಲ್ಲಿರತಕ್ಕಂಥ ಸಪ್ಲೈಯರ್ಸ್‌ಗಳೇ ನೇರವಾಗಿ ಎಂಎಸ್‌ಪಿಸಿ ಗಳಿಗೆ ಸಪ್ಲೈ ಮಾಡತಕ್ಕಂಥ ವ್ಯವಸ್ಥೆಯನ್ನು ಸುಮಾರು 2010 ರಿಂದೀಚೆಗೆ ಏನು ಬಂದಿತ್ತೋ ಅದರಲ್ಲಿ ಹೆಚ್ಚು ಕಳಪೆ ಆಹಾರಗಳು ಸಪ್ಲೈಯರ್ಸ್ ಮಾಡುತ್ತಿದ್ದಾರೆ ಎನ್ನತಕ್ಕಂಥದ್ದನ್ನು ನಾವು ಬಂದನಂತರ ನಾವು ತಿಳಿದುಕೊಂಡ ನಂತರ ಅದನ್ನು ನಮ್ಮ ಎಂಎಸ್‌ಪಿಸಿ ಗಳಿಗೆ ಒಂದು ಸೂಚನೆಯನ್ನು ಕೊಟ್ಟಿದ್ದೆವು. ಸೂಚನೆ ಎಂದರೆ ಒಂದು ಸಲಹೆಯನ್ನು ಕೊಟ್ಟಿದ್ದೆವು. ಅವರುಗಳು ಕೂಡ ಟೆಂಡರ್‌ಗೆ ಹೋಗುವುದು ಒಳ್ಳೆಯದು, ಏಕೆಂದರೆ financial discipline ಮತ್ತು quality maintain ಮಾಡುವುದಕ್ಕೆ ಅನುಕೂಲ ಆಗುತ್ತದೆ ಎನ್ನತಕ್ಕಂಥ ಕಾರಣದಿಂದ ಈ ಒಂದು ಸಲಹೆಯನ್ನು ಕೊಟ್ಟಿದ್ದೆವು. ಆ ಪ್ರಕಾರವಾಗಿ ಎಂಎಸ್‌ಪಿಸಿ ಗಳು ಕೆಲವೊಂದು ಕಡೆ ಟೆಂಡರ್‌ನ್ನೂ ಕೂಡ ಮಾಡಿದ್ದಾರೆ, ಕೆಲವೊಂದು ಕಡೆ ಟೆಂಡರ್ ಕರೆಯುವುದಕ್ಕೆ ಹೋಗಿ ಕೆಲವರು ಕೋರ್ಟ್‌ಗಳಿಗೆ ಹೋಗಿದ್ದು ಉಂಟು. ಇದರ ಬಗ್ಗೆ ಮುಂದೆ ಒಂದು ಪ್ರಶ್ನೆ ಸದನದಲ್ಲಿ ಬರುತ್ತಿದೆ. ಅದರಲ್ಲಿ ಇದರ ಬಗ್ಗೆ ಎಲ್ಲವನ್ನು ಹೇಳುತ್ತಿದ್ದೇವೆ. ಹೀಗಾಗಿ ಇಂಥದ್ದನ್ನು ಕೂಡ ನಾವು ಗಮನದಲ್ಲಿಟ್ಟುಕೊಂಡು ಇದನ್ನು ಸರಿ ಮಾಡತಕ್ಕಂಥ ಕೆಲಸದ ಬಗ್ಗೆ ನಾವು

ಗಮನ ಹರಿಸಿದ್ದೇವೆ. ಖಂಡಿತವಾಗಿಯೂ ಒಂದು ವ್ಯವಸ್ಥೆಯನ್ನು ಬದಲಿ ಮಾಡುವಂಥ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಜೆ.ಟಿ. ಪಾಟೀಲ್: ಬಾಲ ಸಂಜೀವಿನಿಗೆ ಇನ್ನೂ ಎಷ್ಟು ಬಾಕಿ ಕೊಡಬೇಕಾಗಿದೆ, ಎಷ್ಟು ದಿವಸಗಳಲ್ಲಿ ಅದನ್ನು ಪೂರ್ತಿ ಮಾಡುತ್ತೀರಿ?

ಶ್ರೀಮತಿ ಉಮಾಶ್ರೀ: ಇದರ ಬಗ್ಗೆ ತಾವು ಇನ್ನೊಂದು ಪ್ರಶ್ನೆಯಲ್ಲಿ ಕೇಳಿ. ನಾನು ನಿಮಗೆ ಮಾಹಿತಿಯನ್ನು ಒದಗಿಸುತ್ತೇನೆ.

ಉಪಾಧ್ಯಕ್ಷರು: ಈಶ್ವರ ಭೀಮಣ್ಣ ಖಂಡ್ರೆ, ಇಲ್ಲಾ, ದತ್ತಾತ್ರೇಯ ಪಾಟೀಲ್ ರೇವೂರ್, ಇಲ್ಲಾ, ರಾಜೀವ್ ಪಿ, ಇಲ್ಲಾ. ನಾಗೇಂದ್ರ ಬಿ. ಇಲ್ಲಾ, ನರೇಂದ್ರ ಆರ್ ನೀವು ಪ್ರಶ್ನೆ ಕೇಳಿ.

ಉದ್ಯೋಗ ಖಾತ್ರಿ ಯೋಜನೆ

94(876); ಶ್ರೀ ನರೇಂದ್ರ ಆರ್ (ಹನೂರು)

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಅಡಿ ಕೈಗೊಂಡಿರುವ ಕಾಮಗಾರಿಗಳೆಷ್ಟು; (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಆ) ಕಳೆದ 2 ವರ್ಷಗಳಿಂದ ಈ ಕಾಮಗಾರಿಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?